ಆಂದೋಲನ

# ಬೇಸ್‌ಬಾಲ್: ಡಿಬಿಐಟಿ ಇಂಜಿನಿಯರಿಂಗ್ ಚಾಂಪಿಯನ್

## ಪುರುಷ ಮತ್ತು ಮಹಿಳೆಯರ ವಿಭಾಗದಲ್ಲೂ ಪ್ರಶಸ್ತಿ

ಮೈಸೂರು: ನಗರದ ಎಟಿಎಂಇ ಇಂಜಿನಿಯರಿಂಗ್ ಕಾಲೇಜು ಆಯೋಜಿಸಿದ್ದ ರಾಜ್ಯಮಟ್ಟದ ಅಂತರ ಕಾಲೇಜು ಪುರುಷರ ಮತ್ತು ಮಹಿಳೆಯರ ಬೇಸ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಬೆಂಗಳೂರಿನ ಡಿಬಿಐಟಿ ಇಂಜಿನಿಯರಿಂಗ್ ಕಾಲೇಜಿನ ಪುರುಷರ ಮತ್ತು ಮಹಿಳೆಯರ ತಂಡಗಳು ಜಯ ಗಳಿಸಿದವು.

ನಗರದ ಮಾನಸಗಂಗೋತ್ರಿಯ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯಾವಳಿಗೆ ಭಾರತೀಯ ಬೇಸ್‌ಬಾಲ್ ತಂಡದ ಮಾಜಿ ತರಬೇತುದಾರ ಗೋಪಿನಾಥ್ ಪಂದ್ಯಾವಳಿಗೆ ಚಾಲನೆ ನೀಡಿದರು. ವಿವಿಧ ಕಾಲೇಜುಗಳಿಂದ ಪುರುಷರ ಮತ್ತು ಮಹಿಳೆಯರ ಒಟ್ಟು 20 ತಂಡಗಳು ಭಾಗವಹಿಸಿದ್ದವು.

ರಾಜ್ಯಮಟ್ಟದ ಬೇಸ್‌ಬಾಲ್ ಚಾಂಪಿಯನ್‌ಶಿಪ್ -25ರ ಪಂದ್ಯದಲ್ಲಿ ಬೆಂಗಳೂರಿನ ಡಿಬಿಐಟಿ ಇಂಜಿನಿಯರಿಂಗ್ ಕಾಲೇಜು ತಂಡ ಗೆದ್ದು ಬೀಗಿದರೆ, ಬೆಂಗಳೂರಿನ ಆಚಾರ್ಯ ಕಾಲೇಜಿನ ಪುರುಷರ ತಂಡ ಮತ್ತು ಮೈಸೂರಿನ ಎನ್‌ಐಇ ಮಹಿಳಾ ತಂಡವು ರನ್ನರ್ ಅಪ್ ಸ್ಥಾನ ಪಡೆದುಕೊಂಡವು.




ವಿಟಿಯು ಮೈಸೂರು ಪ್ರಾದೇಶಿಕ ವಲಯದ ನಿರ್ದೇಶಕರಾದ ಡಾ.ಹೇಮಾ ಪಾಟೀಲ್ ಮಾತನಾಡಿ, ಕ್ರೀಡೆಗೂ ಶಿಕ್ಷಣದಷ್ಟೇ ಪ್ರಾಮುಖ್ಯತೆ ನೀಡಬೇಕಿದೆ. ಕ್ರೀಡೆಗಳು ಮನುಷ್ಯನ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ಅವಶ್ಯವಾಗಿದೆ. ಕ್ರೀಡೆಯಿಂದ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ಹೇಳಿದರು.

ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಹದೇಶ್, ಮೈಸೂರು ವಿವಿ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಸಿ.ವೆಂಕಟೇಶ್, ಬೇಸ್‌ಬಾಲ್ ಅಸೋಸಿಯೇಷನ್ ಆಯೋಜಕ ಅಧಿಕಾರಿ ಎನ್.ನಾಗರಾಜ್, ಎಟಿಎಂಇ ಕಾಲೇಜಿನ ಪ್ರಾಂಶುಪಾಲ ಡಾ.ಎಲ್.ಬಸವರಾಜ್, ಆಡಳಿತಾಧಿಕಾರಿ ಡಾ.ಸಚ್ಚಿದಾನಂದ ಮೂರ್ತಿ, ಡಾ. ಸುಧೀನ, ಡೀನ್ ಡಾ.ಕೆ.ಶ್ರೀನಿವಾಸ, ವಿಟಿಯು ಕ್ರೀಡೆ ಮತ್ತು ಸಾಂಸ್ಕೃತಿಕ ಸಮಿತಿ ಸದಸ್ಯ ಶಂಕರ ನಾರಾಯಣ, ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಪಿ.ಮುರಳೀಧರ್, ಸಂಯೋಜಕ ಪ್ರೊ.ಹೇಮಂತ್, ಪ್ರೊ.ರೋಹಿತ್ ಉಪಸ್ಥಿತರಿದ್ದರು.

Main Edition
Jun 05, 2025 Page No. 10
Powered by: erelego.com